ಪರಮ ಕೃಪಾಕರ, ಪರಮ ಕರುಣಾಳುವಾದ, ಅಲ್ಲಾಹನ ಹೆಸರಿನಲ್ಲಿ

ನಿಮ್ಮ ನಡುವೆ ಅತ್ಯಂತ ಒಳ್ಳೆಯ ನಡವಳಿಕೆ, ಸದಾಚರಣೆಯ ವಿಷಯದಲ್ಲಿ ಪರಸ್ಪರ ಪೈಪೋಟಿಯನ್ನು ಪ್ರೋತ್ಸಾಹಿಸಲು ಆಕಾಶಗಳು ಮತ್ತು ಭೂಮಿಯನ್ನು ಸೃಷ್ಟಿಸಿದವನೇ ಅವನು

ಹಜ್ ಫಂಡ್ ಆಫ್ ಇಂಡಿಯಾಟಿಎಮ್

(ಝಕಾತ್ ಫೌಂಡೇಶನ್ ಆಫ್ ಇಂಡಿಯಾ – ನೋಂದಾಯಿತ ಟ್ರಸ್ಟ್‌ನ ಒಂದು ಘಟಕ)

ಎಂದೂ ಕೂಡ ಜಗತ್ತಿನ ಎಲ್ಲಾ ಮುಸಲ್ಮಾನರೂ ಹಜೀಗಳಾಗಿಲ್ಲ. ಆಯ್ಕೆಯ ಕೆಲವರು ಮಾತ್ರ ಹಜ್ ಮಾಡುತ್ತಾರೆ ಎಂಬುದು ನಂಬಿಕೆ. ಅದು ಅಲ್ಲಾಹನ ನಿಯಮ. ಆ 'ಆಯ್ಕೆಯ ಕೆಲವರು' ನಾವಾಗುವಂತಾಗಲಿ ಎಂದು ನೀವು ರಚನಾತ್ಮಕವಾಗಿ ಅಪೇಕ್ಷಿಸಿ.

**ಹಜ್‌ಗಾಗಿ ಉಳಿತಾಯ ಮಾಡಬೇಕೆಂಬ ನಿಮ್ಮ ಮೂಲಭೂತ ಧಾರ್ಮಿಕ ಅಗತ್ಯವನ್ನು ಪೂರೈಸಲು ಮತ್ತು ಈ ಉಳಿತಾಯಗಳನ್ನು ಪವಿತ್ರ ಬಡ್ಡಿ-ಮುಕ್ತ ಸುರಕ್ಷತೆಯಲ್ಲಿ ರಕ್ಷಿಸುವುದಕ್ಕಾಗಿ ಎಚ್‌ಎಫ್‌ಐ ಶ್ರಮಿಸುತ್ತದೆ.**

ಹಜ್ ಖರ್ಚು-ವೆಚ್ಚಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಸಾಗಿವೆ. ಒಬ್ಬ ಮುಸಲ್ಮಾನ ವ್ಯಕ್ತಿಗೆ ಹಜ್‌ಗಾಗಿ ಉಳಿತಾಯ ಮಾಡಲು ಸರಾಸರಿ ಏಳರಿಂದ ಎಂಟು ವರ್ಷಗಳ ಕಾಲಾವಕಾಶ ಬೇಕಾಗುತ್ತದೆ. ಈ ಕಾಲಾವಧಿಯಲ್ಲಿ, ಭಾರತೀಯ ಮುಸಲ್ಮಾನರಾದ ನಾವು ಬಹಳಷ್ಟು ಬಾರಿ ಹಣವನ್ನು ಕ್ರಮಬದ್ಧತೆಯಿಲ್ಲದೆ, ಸಾಂಪ್ರದಾಯಿಕ ಶೈಲಿಯಲ್ಲಿ ಉಳಿತಾಯ ಮಾಡುತ್ತೇವೆ. ಹಾಸಿಗೆಯಡಿ, ದಿಂಬಿನ ಕೆಳಗೆ ಅಥವಾ ಮಡಕೆಯಲ್ಲಿ ಇರಿಸಿದ ಹಣ ಅಥವಾ ಬ್ಯಾಂಕ್ ಲಾಕರ್‌ನಲ್ಲಿ ಇರಿಸಿದ ಹಣ ಸುರಕ್ಷಿತವಷ್ಟೇ ಅಲ್ಲ ಅಂತಹ ಉಳಿತಾಯ ವಿಧಾನಗಳು ಬಡ್ಡಿ-ಮುಕ್ತವೆಂದು ನಮ್ಮಲ್ಲಿ ಬಹಳಷ್ಟು ಮಂದಿ ನಂಬುತ್ತೇವೆ.

ಇಸ್ಲಾಮಿಕ್-ಕಾನೂನಿನಲ್ಲಿ ನಿಷೇಧಗೊಳಿಸಲಾದ ಬಡ್ಡಿ ಆಧಾರದ ವ್ಯವಹಾರ ಚಟುವಟಿಕೆಯಲ್ಲಿ ನಮ್ಮ ಉಳಿತಾಯವನ್ನು ಉಪಯೋಗಿಸಿಕೊಳ್ಳದಿರುವುದನ್ನು ಖಚಿತಪಡಿಸಿಕೊಳ್ಳುತ್ತಾ ನಮ್ಮಲ್ಲಿ ಬಹಳಷ್ಟು ಮಂದಿ ಉಳಿತಾಯವನ್ನು ಸಾಂಪ್ರದಾಯಿಕ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇರಿಸಲು ಇಷ್ಟಪಡುವುದಿಲ್ಲ. ಆದರೂ, ಆಧುನಿಕ ಕಾಲದಲ್ಲಿ, ಬ್ಯಾಂಕ್ ಅನ್ನು ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ನಮ್ಮ ಉಳಿತಾಯಕ್ಕೆ ಸುರಕ್ಷತೆಯ ಗ್ಯಾರಂಟಿ ಇರುವುದಿಲ್ಲ. ಇದೊಂದು ವಿರೋಧಾಭಾಸ.

**ಹಜ್ ಉಳಿತಾಯಗಳು ಸಾಮಾಜಿಕ ಅಭಿವೃದ್ಧಿಗಾಗಿ ಮೀಸಲು**

ಹಜ್‌ಗಾಗಿ ಉಳಿತಾಯ ಮಾಡಲಾದ ವೈಯಕ್ತಿಕ ಮೊತ್ತಗಳನ್ನು ಕೂಡಿದರೆ, ಒಂದು ಬಹಳ ದೊಡ್ಡ ಮೊತ್ತ ನಿಷ್ಕ್ರಿಯವಾಗಿರುವುದನ್ನು ಮತ್ತು ಅದು ಯಾವುದೇ ಆರ್ಥಿಕ ಚಟುವಟಿಕೆ ಉಂಟು ಮಾಡದಿರುವುದನ್ನು ನಾವು ಕಾಣುತ್ತೇವೆ. ಇದು ಇಸ್ಲಾಮಿಕ್ ಚಿಂತನೆಗೆ ವಿರೋಧವಾದುದು. ಅಷ್ಟೇ ಅಲ್ಲದೆ, ಹಜ್‌ಗಾಗಿ ಹಣ ಹೊಂದಿಸುವಾಗ ಭೂಮಿ ಮತ್ತು ಆಸ್ತಿಪಾಸ್ತಿ ಮಾರಾಟದ ಅಭ್ಯಾಸವೂ ಇದೆ. ಇದೂ ಸಹ ವ್ಯಕ್ತಿಗಳ ಅಥವಾ ಸಮುದಾಯದ ಆರ್ಥಿಕ ಪ್ರಗತಿಯನ್ನು ಉಂಟುಮಾಡುವುದಿಲ್ಲ.

**ಈ ಸಮಸ್ಯೆಗೆ ಹಜ್ ಫಂಡ್ ಆಫ್ ಇಂಡಿಯಾ, ನೀವು ಹಜ್‌ಗಾಗಿ ಉಳಿತಾಯ ಮಾಡುತ್ತಾ ನಿಮ್ಮ ಪುಣ್ಯವನ್ನೂ ವೃದ್ಧಿಗೊಳಿಸಿಕೊಳ್ಳಬಹುದಾದ ಒಂದು ಸೂಕ್ತ ಪರಿಹಾರದೊಂದಿಗೆ ಹೊರಬಂದಿದೆ.** ಒಂದು ಪವಿತ್ರ ಉದ್ದೇಶಕ್ಕಾಗಿ ನಿಮ್ಮ ಉಳಿತಾಯವನ್ನು ಸುರಕ್ಷಿತವಾಗಿ ಇರಿಸುವ ವ್ಯವಸ್ಥೆಯನ್ನು ಕಲ್ಪಿಸುವ ಇದು, ಒಂದು ಸೇವಾ ಏಜೆನ್ಸಿಯಾಗಿ ಕೆಲಸ ಮಾಡುತ್ತದೆ. ಸೇವೆಯ ಕಾನೂನುಬದ್ಧತೆಯು ಪರಿಶೀಲನೆಗೆ ಒಳಪಟ್ಟಿದೆ.

ಭಾರತೀಯ ಮುಸಲ್ಮಾನರಾದ ಯಾರಾದರೂ ಎಚ್‌ಎಫ್‌ಐದಲ್ಲಿ ತಮ್ಮ ಹಜ್ ಖಾತೆಯನ್ನು ತೆರೆಯಬಹುದು. ಈ ಹಜ್ ಖಾತೆಯಲ್ಲಿ ಸಾವಿರದ ಅಪವರ್ತ್ಯಗಳಲ್ಲಿ ಯಾವುದೇ ಸಮಯದಲ್ಲಿ ಜಮೆಗಳನ್ನು ಮಾಡಬಹುದು. ಅಂದರೆ 1,000, 2,000, 3,000, 4,000, 5,000,ಅಥವಾ ಹೆಚ್ಚು. ಯಾವುದೇ ಗರಿಷ್ಠ ಮಿತಿ ಇಲ್ಲ. ನಿಮಗೆ ಇಷ್ಟ ಬಂದಷ್ಟು ಕಂತುಗಳಲ್ಲಿ ನಿಮಗೆ ಯಾವಾಗ ಅನುಕೂಲವಾಗುತ್ತದೋ ಆವಾಗ ಜಮೆ ಮಾಡಬಹುದು.

**ಹಜ್ ಫಂಡ್ ಆಫ್ ಇಂಡಿಯಾದಲ್ಲಿ ಜಮೆ ಮಾಡುವುದು**

"ಹಜ್ ಫಂಡ್ ಆಫ್ ಇಂಡಿಯಾ ಖಾತೆ ಸಂ. 603020110000239, ಬ್ಯಾಂಕ್ ಆಫ್ ಇಂಡಿಯಾ" ಈ ಹೆಸರಿಗೆ ನೀವು ನಿಮ್ಮ ಹಣದ ಒಂದು ಬ್ಯಾಂಕ್ ಡ್ರ್ಯಾಫ್ಟ್ ಪಡೆದುಕೊಳ್ಳಬೇಕು ಅಥವಾ ಒಂದು “A/C Payee” ಚೆಕ್ ಅನ್ನು ಬರೆದು ದೇಶದಲ್ಲಿರುವ ಬ್ಯಾಂಕ್ ಆಫ್ ಇಂಡಿಯಾದ ಯಾವುದೇ ಶಾಖೆಯಲ್ಲಿ ಜಮಾ ಮಾಡಬೇಕು.

ನೀವು ನಿಮ್ಮ ಪೂರ್ಣ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ ಯಾವುದೇ ಇದ್ದರೆ ಅದನ್ನು ಡ್ರ್ಯಾಫ್ಟ್/ಚೆಕ್ ಹಿಂಭಾಗದಲ್ಲಿ ಬರೆಯಬೇಕು. ದಯವಿಟ್ಟು ಡ್ರ್ಯಾಫ್ಟ್/ಚೆಕ್‌ನ ಎರಡು ಪ್ರತಿಗಳನ್ನು ಮಾಡಿ. ಹಾಗೆ ಮಾಡಿದ ನಂತರ, ದಯವಿಟ್ಟು ಖಾತೆ ತೆರೆಯುವ ನಮೂನೆಯನ್ನು (ಎಚ್‌ಎಫ್‌ಐ-ಎ) ಭರ್ತಿ ಮಾಡಿ ಮತ್ತು ಅದನ್ನು ನಿಮ್ಮ ಡ್ರ್ಯಾಫ್ಟ್ ಅಥವಾ ಚೆಕ್‌ನ ಪ್ರತಿಯೊಂದಿಗೆ ಸ್ಪೀಡ್ ಪೋಸ್ಟ್ ಅಥವಾ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ: **ಸಿಇಒ, ಹಜ್ ಫಂಡ್ ಆಫ್ ಇಂಡಿಯಾ, ಸಿಐಎಸ್‌ಆರ್‌ಎಸ್ ಹೌಸ್, 14 ಜಂಗ್‌ಪುರ ಬಿ, ಮಥುರಾ ರಸ್ತೆ, ನವ ದೆಹಲಿ 110014.**

**ಹಜ್ ಫಂಡ್ ಆಫ್ ಇಂಡಿಯಾದಿಂದ ಹಿಂದೆಗೆದುಕೊಳ್ಳುವಿಕೆ:**

ನೀವು ಹಜ್ ಮಾಡಲು ಹೊರಟಾಗ ನಿಮ್ಮ ಖಾತೆಯಿಂದ ಹಿಂದೆಗೆದುಕೊಳ್ಳುವಿಕೆ ಬಹಳ ಸರಳ.

ನೀವು ನಮಗೆ ಎಚ್‌ಎಫ್‌ಐ-ಬಿ ನಮೂನೆಯಲ್ಲಿ ಒಂದು ಅರ್ಜಿಯನ್ನು ಅಂಚೆಯ ಮೂಲಕ ಕಳುಹಿಸಬೇಕಾಗುತ್ತದೆ ಅಥವಾ ಹಸ್ತಾಂತರ ಮಾಡಬೇಕಾಗುತ್ತದೆ. ನಾವು ಒಂದು ಚೆಕ್ ಅಥವಾ ಪೇ ಆರ್ಡರ್ ಅನ್ನು ನಿಮ್ಮ ಹೆಸರಿಗೆ ಅಥವಾ ಹಜ್ ಸಮಿತಿಯ ಹೆಸರಿಗೆ ಅಥವಾ ನಿಮ್ಮ ಟ್ರಾವೆಲ್ ಏಜೆಂಟರ ಹೆಸರಿಗೆ ವಿತರಿಸುತ್ತೇವೆ. ಇದು ನಿಮ್ಮ ಆಯ್ಕೆ. ಇದನ್ನು ನಿಮಗೆ ಸ್ಪೀಡ್ ಪೋಸ್ಟ್ ಅಥವಾ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಲಾಗುತ್ತದೆ ಅಥವಾ ನೀವೇ ಖುದ್ದಾಗಿ ಪಡೆದುಕೊಳ್ಳಬಹುದು.

**ಹಜ್ ಫಂಡ್ ಆಫ್ ಇಂಡಿಯಾವನ್ನು ಸಮುದಾಯದ ಲಾಭಕ್ಕಾಗಿ ಬಳಸುವುದು:**

ಎಚ್‌ಎಫ್‌ಐ, ತನಗೆ ಹಣಕಾಸು ವಿಚಾರದಲ್ಲಿ ಸಲಹೆ ನೀಡುವ ಹಾಗೂ ತನ್ನನ್ನು ಮೇಲ್ವಿಚಾರಣೆ ಮಾಡುವಂತಹ ಒಂದು **ಇಸ್ಲಾಮಿಕ್-ಕಾನೂನು ಸಲಹಾಸಮಿತಿಯನ್ನು ಹೊಂದಿದೆ** (ಸಂಪೂರ್ಣ ಪಟ್ಟಿಯನ್ನು ನೋಡಿ). ಇಸ್ಲಾಮಿಕ್-ಕಾನೂನು ಮಾರ್ಗದರ್ಶಿಯನ್ನು ಅನುಸರಿಸುತ್ತಾ, ಇದು ಬಹು-ಮುಖಿ ಬಂಡವಾಳ ಯೋಜನೆಗಳನ್ನು ಗುರಿಯಾಗಿ ಹೊಂದಿರುತ್ತದೆ.

ಹಜ್ ಫಂಡ್ ಆಫ್ ಇಂಡಿಯಾದ ಸ್ವಲ್ಪ ಭಾಗವನ್ನು ಬಡ ಮುಸಲ್ಮಾನರಿಗೆ ಅಲ್ಪಾವಧಿ ಮೈಕ್ರೊಫೈನಾನ್ಸ್ ಸಾಲದ ರೂಪದಲ್ಲಿ ನೀಡಲು ಉಪಯೋಗಿಸಲಾಗುತ್ತದೆ. ಉದಾಹರಣೆಗೆ, ಒಬ್ಬ ರಿಕ್ಷಾ ತುಳಿಯುವವ ಒಂದು ರಿಕ್ಷಾವನ್ನು ಕೊಳ್ಳುತ್ತಾನೆ (ಪ್ರತಿದಿನ ರಿಕ್ಷಾ ಬಾಡಿಗೆಯನ್ನು ಅದರ ಮಾಲೀಕರಿಗೆ ಕೊಡುವ ಬದಲು). ಆರು ತಿಂಗಳ ಸಮಯದಲ್ಲಿ ಅವನು ತನ್ನ ಉಳಿತಾಯದಿಂದ ಸಾಲವನ್ನು ಹಜ್ ಫಂಡ್ ಆಫ್ ಇಂಡಿಯಾಗೆ (ಬಡ್ಡಿರಹಿತವಾಗಿ) ಹಿಂದಿರುಗಿಸುತ್ತಾನೆ.

ಈ ರೀತಿ, ರಿಕ್ಷಾ ತುಳಿಯುವವನನ್ನು ಆರ್ಥಿಕವಾಗಿ ಸಬಲಗೊಳಿಸಿ ಆರು ತಿಂಗಳ ಒಳಗೆ ಸಾಲದ ಮೊತ್ತ ಹಿಂದಿರುಗುತ್ತದೆ.

ಇಷ್ಟೇ ಅಲ್ಲದೆ, ಜಮೆಯಾದ ಮೊತ್ತದ ಮೇಲೆ, ಜಮೆ ಮಾಡಿದವರ ಪರವಾಗಿ ತನ್ನ ಮೂಲ ಸಂಸ್ಥೆಯಾದ ಝಕಾತ್ ಫೌಂಡೇಶನ್ ಇಂಡಿಯಾಗೆ ಎಚ್‌ಎಫ್‌ಐ ಝಕಾತ್ ಪಾವತಿಗಳನ್ನು ಮಾಡುತ್ತದೆ.

ಜಮೆ ಮಾಡಿದವರ ಖಾತೆಗಳಿಂದ ಸಂಗ್ರಹಿಸಿದ ಝಕಾತ್ ಮೂಲಕ ಎಚ್‌ಎಫ್‌ಐ ಗಮನೀಯವಾದ ಸಾಮಾಜಿಕ ಸೇವೆ ಒದಗಿಸುತ್ತದೆ ಎಂಬ ವಿಶೇಷ ತೃಪ್ತಿಯನ್ನು ಖಾತೆದಾರರು ಪಡೆಯುತ್ತಾರೆ. ಈ ಮೊತ್ತವನ್ನು ಝಕಾತ್ ಫೌಂಡೇಶನ್ ಆಫ್ ಇಂಡಿಯಾ ಮೂಲಕ ಖುರಾನ್ ವರ್ಗೀಕರಣಗಳಲ್ಲಿ ನಿರ್ದಿಷ್ಟಪಡಿಸಲಾದಂತೆ ಅಗತ್ಯವುಳ್ಳವರಿಗೆ ಸಹಾಯ ಮಾಡಲು ಬಳಸಲಾಗುತ್ತದೆ.

ಈ ರೀತಿ, ನಿಮ್ಮ ಹಜ್ ಉಳಿತಾಯದ ಪಾವಿತ್ರ್ಯವು ಹೆಚ್ಚುತ್ತದೆ ಮತ್ತು ನಿಜಕ್ಕೂ ನೀವು ಹಜ್ ಮಾಡಿದ ಪುಣ್ಯ ಇನ್ನೂ ಹೆಚ್ಚಿನದಾಗುತ್ತದೆ. ಯಾವುದೇ ಸಂದರ್ಭದಲ್ಲಿ, ಪರಲೋಕದಲ್ಲಿ ನಿಮಗಾಗಿ ಒಂದು ಉನ್ನತ ಸ್ಥಾನವನ್ನು ಕಾಯ್ದಿರಿಸುತ್ತಾ "ಸಮುದಾಯವು ವ್ಯಕ್ತಿಗಿಂತ ಮುಖ್ಯವಾದುದು" – ಎಂಬ ಹಜ್‌ನ ವಿಶಾಲ ಉದ್ದೇಶವು ಪೂರ್ಣವಾಗುತ್ತದೆ.

ಭಾರತೀಯ ಮುಸಲ್ಮಾನರು ಚಿಕ್ಕ ವಯಸ್ಸಿನಿಂದಲೇ ಉಳಿತಾಯ ಮಾಡುವುದನ್ನು ಆರಂಭಿಸುವುದನ್ನು ಎಚ್‌ಎಫ್‌ಐ ಪ್ರೋತ್ಸಾಹಿಸುತ್ತದೆ. ಇದರಿಂದ ಅವರು ವಯಸ್ಕರಾದಾಗ ತೀರ್ಥಯಾತ್ರೆ ಮಾಡಲು ಸಾಧ್ಯವಾಗುತ್ತದೆ. ಭವಿಷ್ಯದ ತೀರ್ಥಯಾತ್ರಿಯಾಗಿ ("ಅಝ್ಮ್-ಹಜ್") ಭಾರತೀಯ ಮುಸಲ್ಮಾನ ಸಮುದಾಯದ ಎಲ್ಲಾ ಭಾಗಗಳೂ, ಎಚ್‌ಎಫ್‌ಐನಲ್ಲಿ ಒಂದು ಖಾತೆಯನ್ನು ಹೊಂದಿದಾಗ ಅವು ಹೆಮ್ಮೆಯಿಂದ ತಲೆಯೆತ್ತಿ ನಿಲ್ಲುತ್ತವೆ.

ಇತಿಹಾಸದುದ್ದಕ್ಕೂ, 'ಹಜ್ ಉಳಿತಾಯವು' ಸಮೃದ್ಧಿಗೆ ಒಂದು ಆಕರವಾಗಿದೆ. ಇಂದಿನ ಜಾಗತಿಕ ವ್ಯವಹಾರದಲ್ಲಿ, ಹಜ್‌ನೊಂದಿಗೆ ಸಂಬಂಧಿಸಿದ ಕುಶಲತೆಯನ್ನು ಚತುರತೆಯಿಂದ ಬಳಸಿದರೆ ಅದು ಸಮುದಾಯದ ಉದ್ಧಾರಕ್ಕೆ ಒಂದು ಆಕರವಾಗಬಹುದು.

ಇಂದಿನ ಆಧುನಿಕ ಜಗತ್ತಿನಲ್ಲಿ ಇಸ್ಲಾಮಿಕ್ ಬೋಧನೆಗಳನ್ನು ಹೇಗೆ ಕಾರ್ಯಗತಗೊಳಿಸಬಹುದು, ಒಮ್ಮೆ ಕಾರ್ಯಗತಗೊಳಿಸಿದ ನಂತರ, ಇವುಗಳು ವ್ಯಕ್ತಿಗಳಿಗೆ ಮತ್ತು ಮುಸಲ್ಮಾನ-ಸಮುದಾಯಕ್ಕೆ ಎಷ್ಟು ಪ್ರಯೋಜನಕಾರಿ ಮತ್ತು ಲಾಭಕಾರಿ ಎಂಬುದರ ಹಲವು ಉದಾಹರಣೆಗಳಲ್ಲಿ ಎಚ್‌ಎಫ್‌ಐ ಒಂದು.

ಹಜ್ ಫಂಡ್‌ನ ಬಗ್ಗೆ ವಿವರಗಳು:

**ಉರ್ದು**: ಹಜ್ ಫಂಡ್‌ನ ಕಾರ್ಯನೀತಿಗಾಗಿ ಇಲ್ಲಿ ಕ್ಲಿಕ್ ಮಾಡಿ >http://www.zakatindia.org/Files/Haj Fund %28Zakat Foundation of India%29.pdf

**ಇಂಗ್ಲಿಷ್:** ಹಜ್ ಫಂಡ್‌ನ ಕಾರ್ಯನೀತಿಗಾಗಿ ಇಲ್ಲಿ ಕ್ಲಿಕ್ ಮಾಡಿ >

**ಹಜ್ ಫಂಡ್ ಆಫ್ ಇಂಡಿಯಾ ಖಾತೆಯನ್ನು ಹೇಗೆ ತೆರೆಯುವುದು:**

ದಯವಿಟ್ಟು ಇಲ್ಲಿ > ಲಭ್ಯವಿರುವ 'ಖಾತೆ ತೆರೆಯುವ ನಮೂನೆಯನ್ನು' ಡೌನ್‌ಲೋಡ್ ಮಾಡಿಕೊಳ್ಳಿ. ನಮೂನೆಯನ್ನು ಭರ್ತಿ ಮಾಡಿ ಸ್ಪೀಡ್ ಪೋಸ್ಟ್ ಅಥವಾ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಅದನ್ನು ಪಟ್ಟಿ ಮಾಡಲಾದ ವಿಳಾಸಕ್ಕೆ ಕಳುಹಿಸಿ. ನಿಮ್ಮ ಚೆಕ್ ಅಥವಾ ಬ್ಯಾಂಕ್ ಡ್ರಾಫ್ಟ್ ಅನ್ನು ಬ್ಯಾಂಕ್ ಆಫ್ ಇಂಡಿಯಾದ ಯಾವುದೇ ಖಾತೆಯಲ್ಲಿ ಜಮಾ ಮಾಡಬೇಕು. **ಎಲ್ಲಾ ಶಾಖೆಗಳ ಪಟ್ಟಿಗಾಗಿ** ಇಲ್ಲಿ ಕ್ಲಿಕ್ ಮಾಡಿ >

'ಹಜ್ ಫಂಡ್ ಆಫ್ ಇಂಡಿಯ' ಭಾರತದ ಟ್ರೇಡ್‌ಮಾರ್ಕ್ ಕಾಯ್ದೆಯಡಿ **ಟ್ರೇಡ್‌ಮಾರ್ಕ್** ಹೊಂದಿದೆ.

ಪ್ರಶ್ನೆಗಳು? ದಯವಿಟ್ಟು ಇಮೇಲ್ ಮಾಡಿ

hajfundofindia@zakatindia.org

“ಸಮುದಾಯದ ಲಾಭಕ್ಕಾಗಿ ಮತ್ತು ಪವಿತ್ರ ಬಡ್ಡಿ-ಮುಕ್ತ ಸುರಕ್ಷತೆಯಲ್ಲಿ ತೀರ್ಥಯಾತ್ರೆ ಮಾಡಬೇಕೆಂದಿರುವವರ ಉಳಿತಾಯವನ್ನು ರಕ್ಷಿಸುವುದಕ್ಕಾಗಿ **ಹಜ್ ಫಂಡ್ ಆಫ್ ಇಂಡಿಯಾ** ಎಂಬ ಹೆಸರಿನಲ್ಲಿ ಒಂದು ಪ್ರತ್ಯೇಕ ಘಟಕದ ಸ್ಥಾಪನೆಯ ಆಲೋಚನೆಯ ಬಗ್ಗೆ **ಭಾರತದ ಹಜ್ ಸಮಿತಿಯು** ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ.

“ಪ್ರೆಸ್ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಯೋಜನೆಗೆ ವ್ಯಾಪಕ ಪ್ರಚಾರ ನೀಡಬೇಕು.”

ಭಾರತದ ಹಜ್ ಸಮಿತಿ

(ಪತ್ರ ಜಿಇಎನ್/2010/1055, ದಿನಾಂಕ 22 ಏಪ್ರಿಲ್, 2010)